C1/19-8

ಕರ್ನಾಟಕ ಸರ್ಕಾರ

ರಾಷ್ಟ್ರೀಯ ಸೇವಾ ಯೋಜನೆ

ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ ಬೆಂಗಳೂರು-560012

ಸಂಖ್ಯೆ:ಪಪೂಶಿಇ/ರಾಸೇಯೋ/ಸದ್ಭಾವನ/11/2020-21 ದಿನಾಂಕ :18/08/2020

**ಜ್ಞಾಪನ**

ವಿಷಯ: ದಿನಾಂಕ:20-08-2020 ಸದ್ಭಾವನಾ ದಿನಾಚರಣೆಯನ್ನು ಆಚರಿಸುವ ಬಗ್ಗೆ

ಉಲ್ಲೇಖ: ರಾಜ್ಯ ಸಂಪರ್ಕಾಧಿಕಾರಿಗಳು, ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು ಎನ್.ಎಸ್.ಎಸ್ ರವರ ಪತ್ರ **No.ಯುಸೇಇ/ರಾಸೇಯೋ/19/2020-21/108** ದಿನಾಂಕ:18-08-2020

****

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಪಟ್ಟಂತೆ ರಾಷ್ಟ್ರೀಯ ಸೇವಾ ಯೋಜನಾ ಕೋಶ, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಪ್ರಾದೇಶಿಕ ನಿರ್ದೇಶನಾಲಯ, ರಾಷ್ಟ್ರೀಯ ಸೇವಾ ಯೋಜನೆ, ಭಾರತ ಸರ್ಕಾರದ ನಿರ್ದೇಶದಂತೆ ದಿ:20-08-2020ರಂದು ಮಾಜಿ ಪ್ರಧಾನಿ ದಿವಂಗತ ರಾಜೀವ ಗಾಂಧಿಯವರ ಜನ್ಮದಿನಾಚರಣೆಯಂಗವಾಗಿ ಸದ್ಭಾವನ ದಿನಾಚರಣೆಯನ್ನು ಆಚರಿಸಲು ಕೋರಿದೆ. ಸದರಿ ದಿನದಂದು ಜನರಲ್ಲಿ ಭಾಷೆ, ಧರ್ಮ, ಪ್ರಾದೇಶಿಕತೆ ಕುರಿತಾಗಿ ಸದ್ಭಾವಾನೆ ಮುಡುವಂತೆ ವಿವಿಧ ಕಾರ್ಯಕ್ರಮಗೊಳಗೊಂಡಿರುವ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳು ಹೊಂದಿರುವ ಕಾಲೇಜುಗಳಲ್ಲಿ ಕೋವಿಡ್-19 ಪ್ರಯುಕ್ತ ಕಡಿಮೆ ಸಂಖ್ಯೆಯ ಸ್ವಯಂ ಸೇವಕರು/ಸೇವಕಿಯರು ಸೇರಿಕೊಂಡು ಅಥವಾ ಅನ್ ಲೈನ್ ಮೂಲಕ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಂತೆ ಪ್ರಂಶುಪಾಲರಿಗೆ ಮತ್ತು ಕಾರ್ಯಕ್ರಮಾಧಿಕಾರಿಗಳಿಗೆ ಸೂಚಿಸಿದೆ. ಕರ್ನಾಟಕ ಸರ್ಕಾರದ ಸಚಿವಾಲಯದ ಮಾರ್ಗ ಸೂಚಿಯನ್ನು ಪತ್ರದಲ್ಲಿ ಲಗತ್ತಿಸಿದೆ.

ಸದ್ಭಾವನ ದಿನಾಚರಣೆಯನ್ನು ಘಡಕಗಳಲ್ಲಿ ಹಮ್ಮಿಕೊಂಡಿರುವ ಸಂಕ್ಷಿಪ್ತ ವರದಿಯನ್ನು ಎನ್.ಎಸ್.ಎಸ್ ಸಂಯೋಜಕಾಧಿಕಾರಿಗಳ ಇ-ಮೇಲ್:**pubnss@gmail.com** ಕಳುಹಿಸಿ ಕೋಡುವುದು.

(ಡಾ. ರಮೇಶ್ ಸಿ.ಜಿ)

ಎನ್.ಎಸ್.ಎಸ್ ಸಂಯೋಜನಾಧಿಕಾರಿಗಳು

ಪದವಿ ಪೂರ್ವ ಶಿಕ್ಷಣ ಇಲಾಖೆ

ಬೆಂಗಳೂರು

<u>ಪ್ರತಿಗಳು:</u>

1. ಡಾ: ಗಣನಾಥ ಶೆಟ್ಟಿ, ರಾಜ್ಯ ಎನ್.ಎಸ್.ಎಸ್.ಅಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,ಎನ್.ಎಸ್.ಎಸ್ ಕೋಶ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
2. ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಮಲ್ಲೇಶ್ವರಂ, ಬೆಂಗಳೂರು.
3. ಶ್ರೀ ಕೆ.ವಿ ಖಾದ್ರಿ ನರಸಿಂಹಯ್ಯ ಪ್ರಾಂತಿಯ ನಿರ್ದೇಶಕರು, ಪ್ರಾಂತೀಯ ಕೇಂದ್ರ ಬಸವನಗುಡಿ ಬೆಂಗಳೂರು.
4. ಸಂಬಂಧಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು.
5. ಸಂಬಂಧಪಟ್ಟ ವಿಭಾಗೀಯ ಅಧಿಕಾರಿಗಳು.
6. ಸಂಬಂಧಪಟ್ಟ ಕಾಲೇಜುಗಳ ಕಾರ್ಯಕ್ರಮಾಧಿಕಾರಿಗಳು.
7. ಸಹಾಯಕ ನಿರ್ದೇಶಕರು, ಇ-ಆಡಳಿತ ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು.
8. ಕಛೇರಿ ಪ್ರತಿ.

# ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಬೇಧಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಬೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇನೆಂದು ಸಹ ಪ್ರತಿಜ್ಞೆ ಮಾಡುತ್ತೇನೆ.